# ಬಾಲ ರಾಮಕೃಷ್ಣ

ಎಚ್.ವಿ. ಸರೋಜ

(ಹಿಂದಿನ ಸಂಚಿಕೆಯಿಂದ ಮುಂದುವರೆದುದು)

ದೃಶ್ಯ ೯

ಚಂದ್ರ : ರಾಮ್‌ಕುಮಾರಾ.

ರಾಮ್‌ಕುಮಾರ್: ಏನಮ್ಮ?

ಚಂದ್ರ : ಗದಾಯ್‌ಗೆ ೯ ವರ್ಷ ಆಯಿತಪ್ಪ. ಇದು ಅವನ ಉಪನಯನ ಮಾಡುವುದಕ್ಕೆ ಸರಿಯಾದ ವಯಸ್ಸು. ಆದ್ದರಿಂದ ಅವನ ಮುಂಜಿಯ ಏರ್ಪಾಡು ಮಾಡಪ್ಪ.

ರಾಮ್‌ಕುಮಾರ್ : ಆಗಲಮ್ಮ.

ಚಂದ್ರ : ಗದಾಯ್, ಗದಾಯ್.

ಗದಾಯ್ : ಏನಮ್ಮ?

ಚಂದ್ರ : ನೋಡಪ್ಪ, ನಿನಗೀಗ ೯ ವರ್ಷ ವಯಸ್ಸು. ನಾನು ನಿನ್ನಣ್ಣ ನಿನಗೆ ಮುಂಜಿ ಮಾಡಬೇಕೆಂದು ನಿಶ್ಚಯಿಸಿದ್ದೇವೆ.

ಗದಾಯ್ : ಸರಿಯಮ್ಮ, ಆದರೆ ನನ್ನದೊಂದು ಮಾತು ನಡೆಸಿ ಕೊಡಬೇಕಮ್ಮ.

ಚಂದ್ರ : ಏನದು, ಕಂದ?

ಗದಾಯ್ : ಅಮ್ಮ, ಧನಿ ನನ್ನ ಉಪನಯನ ಸಮಯದಲ್ಲಿ ಅವಳಿಂದಲೇ ನಾನು ಮೊದಲ ಭಿಕ್ಷೆ ಸ್ವೀಕರಿಸುತ್ತೇನೆ ಎಂದು ನನ್ನಿಂದ ಮಾತು ತೆಗೆದುಕೊಂಡಿದ್ದಾಳಮ್ಮ. ಅದನ್ನು ನಾನು ನಡೆಸಿಕೊಡಲೇಬೇಕು.

ರಾಮ್ : ಏನು? ಧನಿಯಿಂದ ಪ್ರಥಮ ಭಿಕ್ಷೆಯೇ. ಅದು ಹೇಗೆ ಸಾಧ್ಯ? ಆಕೆ ಕೀಳು ಜಾತಿಯವಳು!

ಗದಾಯ್ : ಅದೆಲ್ಲ ನನಗೆ ಗೊತ್ತಿಲ್ಲ. ನಾನು ಅವಳಿಗೆ ಮಾತು ಕೊಟ್ಟಿದ್ದೇನೆ. ಆ ಮಾತನ್ನು ಉಳಿಸಿಕೊಳ್ಳಲೇಬೇಕು.

ಚಂದ್ರ : ಹಾಗೆಲ್ಲ ಹಠ ಹಿಡಿಯಬೇಡ ಮಗು. ನಮ್ಮ ಸಂಪ್ರದಾಯದಂತೆ ನಾವು ಆಚರಿಸಬೇಕಲ್ಲವೆ?

ಗದಾಯ್ : ಅಮ್ಮ, ಸಂಪ್ರದಾಯ ಎಂದು ಸತ್ಯವನ್ನು ಬಿಡಬೇಕೆ? ಒಂದು ಸರ್ತಿ ಯಾರಿಗಾದರೂ ಮಾತುಕೊಟ್ಟರೆ ಅದನ್ನು ಪರಿಪಾಲಿಸಲೇಬೇಕು. ಅಮ್ಮ, ನಾನು ವಚನಭ್ರಷ್ಟನಾಗಲಾರೆ.

ರಾಮ್ : ಗದಾಯ್, ಈ ರೀತಿ ಹಠ ಹಿಡಿಯಬೇಡ. ನಾನು ಧನಿಗೆ ಎಲ್ಲ ವಿವರಿಸಿ ಹೇಳುತ್ತೇನೆ.

ಗದಾಯ್ : ನೋಡಣ್ಣ, ಉಪನಯನ ಎನ್ನುವುದು ಒಂದು ಪವಿತ್ರ ವ್ರತ. ಇದನ್ನು ಮಾಡಿಕೊಳ್ಳುವವರು ಪರಿಶುದ್ಧ ಹೃದಯ ದವರಾಗಿರಬೇಕು. ಆದರೆ ನಾನು ಕೊಟ್ಟ ವಚನವನ್ನು ಮುರಿದು ಅಸತ್ಯವಂತನಾಗಿ ಹೇಗೆ ಉಪನಯನ ಮಾಡಿಕೊಳ್ಳಲಿ? ನಿನಗೆ ಇದು ಒಪ್ಪಿಗೆಯೇ?

ರಾಮ್ : ಗದಾಯ್, ನೀನು ನನ್ನನ್ನು ನಿನ್ನ ವಾದದಿಂದ ಇಕ್ಕಟ್ಟಿಗೆ ಸಿಕ್ಕಿಸುತ್ತಿದ್ದೀಯೆ. ಇರಲಿ ಪಂಡಿತರನ್ನು ವಿಚಾರಿಸಿ ನೋಡುತ್ತೇನೆ.

ಗದಾಯ್ : ಅಣ್ಣ, ನೀನೇನೇ ಮಾಡು. ಧನಿಗೆ ಮೊದಲ ಭಿಕ್ಷೆಗೆ ಅನುಮತಿ ಇತ್ತರೆ ಮಾತ್ರ ನಾನು ಉಪನಯನ ಮಾಡಿಕೊಳ್ಳುವೆ. ಇಲ್ಲದಿದ್ದರೆ ನನಗೆ ಉಪನಯನವೇ ಬೇಡ. (*ಹೋಗುವನು*)

ರಾಮ್ : ಅಮ್ಮ, ಇವನು ಹೀಗೆ ಹಠ ಹಿಡಿದಿದ್ದಾನಲ್ಲ. ಏನು ಮಾಡುವುದು?

ಚಂದ್ರ : ಅವನು ಬೇಡದ ವಿಷಯಕ್ಕೆ ಹಠ ಹಿಡಿಯುವುದಿಲ್ಲಪ್ಪ. ಆದರೆ ಯಾವುದಾದರೂ ಒಂದು ವಿಷಯಕ್ಕೆ ಹಠ ಹಿಡಿದ ಎಂದರೆ ಏನಾದರೂ ಅದನ್ನು ಬಿಡುವುದಿಲ್ಲ.

ರಾಮ್ : ಒಂದು ರೀತಿಯಲ್ಲಿ ಅವನು ಹೇಳುವುದು ನಿಜವಮ್ಮ. ಮಾತು ಕೊಟ್ಟಮೇಲೆ ಅದನ್ನು ಉಳಿಸಿಕೊಳ್ಳಲೇಬೇಕು. ಇನ್ನೇನು ಮಾಡುವುದು, ಅದೇ ರೀತಿ ಮಾಡೋಣ.

[*ರಾಮಕೃಷ್ಣರು ಚಿಕ್ಕ ವಯಸ್ಸಿನಿಂದಲೇ ಎಷ್ಟು ಸತ್ಯನಿಷ್ಠ ರಾಗಿದ್ದರೆಂಬುದು ಈ ಘಟನೆಯಿಂದ ನಮಗೆ ತಿಳಿಯುತ್ತದೆ. ಒಣ ಆಚಾರಕ್ಕೆ ಒಳಗಾಗದೆ ಅದರ ಒಳಗಿರುವ ತಿರುಳನ್ನು ಅರಿತು ಅಂತೆಯೇ ನಡೆಯುವುದು ಅವರ ಬಾಲ್ಯಜೀವನದಿಂದಲೇ ಪ್ರಾರಂಭವಾಗಿತ್ತು. ಅವರು ಜಾತೀಯತೆಗೆ ಬದ್ಧರಾಗಿರಲಿಲ್ಲ ವೆಂಬುದೂ ಈ ಘಟನೆಯಿಂದ ತಿಳಿದುಬರುತ್ತದೆ*]

ದೃಶ್ಯ ೧೦

[*ಶಿವನ ಪಾತ್ರ. ಸ್ನೇಹಿತರೆಲ್ಲ ಸೇರಿದ್ದಾರೆ*]

ಸ್ನೇಹಿತ ೧ : ಗದಾಯ್, ಶಿವರಾತ್ರಿ ಬರುತ್ತಿದೆಯಲ್ಲೋ, ಶಿವನ ನಾಟಕ ಮಾಡೋಣ ಕಣೋ.

ಸ್ನೇಹಿತ ೨ : ಹೌದೋ ಗದಾಯ್, ಅಂದು ಊರಿನ ಜನರೆಲ್ಲ ಜಾಗರಣೆ ಮಾಡುತ್ತಾರೆ. ಅಕ್ಕಪಕ್ಕದ ಹಳ್ಳಿಯವರೂ ಕೂಡ ನಾಟಕ ಆಡುತ್ತೇವೆಂದರೆ ನೋಡಲು ಬರುತ್ತಾರೆ. ಆದ್ದರಿಂದ ಶಿವನ ನಾಟಕ ನಮಗೆಲ್ಲ ಹೇಳಿಕೊಡೋ. ಆಡೋಣ.

ಗದಾಯ್ : ಆಯಿತು. ನಾಟಕ ಹೇಳಿಕೊಡುತ್ತೇನೆ.

ಸ್ನೇಹಿತ ೩ : ಗದಾಯ್, ನೀನು ಶಿವನ ಪಾತ್ರ ಹಾಕೋ. ಚೆನ್ನಾಗಿ ಒಪ್ಪುತ್ತೆ.

ಗದಾಯ್ : ನಾನು ಅಂದು ಯಾವ ಪಾತ್ರವನ್ನೂ ಹಾಕು ವುದಿಲ್ಲ.

ಸ್ನೇಹಿತ ೪ : ಯಾಕೋ?

**ಗದಾಯ್** : ಅಂದು ನಾನು ಬೆಳಿಗ್ಗೆ ಪೂಜೆ ಮಾಡಿ, ರಾತ್ರಿ ನಾಲ್ಕು ಯಾಮದ ಪೂಜೆಯನ್ನು ಮಾಡುತ್ತಾ ಜಾಗರಣೆ ಮಾಡಬೇಕೆಂದು ಸಂಕಲ್ಪಿಸಿದ್ದೇನೆ.

**ಸ್ನೇಹಿತ ೫** : ಹಾಗಾದರೆ ನಾಟಕ ಹೇಗೆ ಆಡುವುದು?

**ಗದಾಯ್** : ನಾನಿಲ್ಲದಿದ್ದರೇನು? ನಿಮಗೆಲ್ಲ ಪಾತ್ರಗಳನ್ನು ಹೇಳಿಕೊಟ್ಟಿರುತ್ತೇನೆ. ನೀವು ಮಾಡಿ.

**ಸ್ನೇಹಿತ ೬** : ಹೋಗೋ, ನೀನಿಲ್ಲದಿದ್ದರೆ ನಮಗೆ ನಾಟಕದಲ್ಲಿ ಮಜವೇ ಬರುವುದಿಲ್ಲ.

**ಗದಾಯ್** : ಏನು ಮಾಡುವುದು? ನಾನು ಸಂಕಲ್ಪ ಮಾಡಿಬಿಟ್ಟಿದ್ದೇನೆ. ನಡೆಯಿರಿ, ನಿಮಗೆಲ್ಲ ಪಾತ್ರಗಳನ್ನು ಹೇಳಿಕೊಡುತ್ತೇನೆ.

### ದೃಶ್ಯ ೧೧

[*ಅಂದು ಶಿವರಾತ್ರಿ. ಸೀತಾನಾಥ ಪೈನಿಯವರ ಮನೆ ಮುಂದೆ ಚಪ್ಪರ ಹಾಕಿ ಶಿವನ ನಾಟಕಕ್ಕೆ ಎಲ್ಲ ಏರ್ಪಾಟು ಮಾಡಿದ್ದಾರೆ. ಆ ಹಳ್ಳಿಯವರೂ ಅಕ್ಕಪಕ್ಕದ ಹಳ್ಳಿಯವರೂ ನಾಟಕ ನೋಡಲು ನೆರೆದಿದ್ದಾರೆ. ಆದರೆ ಶಿವನ ಪಾತ್ರಧಾರಿಗೆ ಅಸಾಧ್ಯ ಜ್ವರ. ಅವನು ಮೇಲೇಳುವಂತೆಯೇ ಇಲ್ಲ. ನಾಟಕದವರಿಗೆಲ್ಲ ಯೋಚನೆ. ಏನು ಮಾಡುವುದು?*]

**ಸ್ನೇಹಿತ ೧** : ಏನೋ ಮಾಡೋದು ಈಗ?

**ಸ್ನೇಹಿತ ೨** : ಶಿವನ ಪಾತ್ರಧಾರಿಯ ಅಸಾಧ್ಯ ಜ್ವರದಿಂದ ನಾಟಕ ನಿಲ್ಲಿಸಲಾಗಿದೆ ಎಂದು ಹೇಳೋಣ.

**ಸ್ನೇಹಿತ ೩** : ಅಯ್ಯೋ, ಅಯ್ಯೋ, ಆ ವಿಚಾರ ಹೇಳಿದರೆ ಅಷ್ಟು ಹೊತ್ತಿನಿಂದ ಕಾದಿರುವ ಜನ ಮತ್ತು ಅಕ್ಕಪಕ್ಕದಿಂದ ಗಾಡಿ ಕಟ್ಟಿಸಿಕೊಂಡು ಬಂದಿರುವ ನೆರೆ ಹಳ್ಳಿಯವರು ಸುಮ್ಮನಿರುತ್ತಾರೆಯೇ? ಗಲಾಟೆ ಎಬ್ಬಿಸುತ್ತಾರೆ.

**ಸ್ನೇಹಿತ ೪** : ಬನ್ನಿ, ಗದಾಯ್‌ನನ್ನೇ ಪಾತ್ರ ಮಾಡು ಎಂದು ಕೇಳಿಕೊಳ್ಳೋಣ.

**ಸ್ನೇಹಿತ ೫** : ಏ! ಅವನು ಒಂದು ಸರ್ತಿ ಮಾಡುವುದಿಲ್ಲ ಅಂದರೆ ಏನು ಮಾಡಿದರೂ ಒಪ್ಪುವುದಿಲ್ಲ ಕಣೋ.

**ಸ್ನೇಹಿತ ೬** : ನಾನು ಒಪ್ಪಿಸುತ್ತೇನೆ, ಬನ್ನಿ.

[*ಎಲ್ಲರೂ ಗದಾಯ್ ಮನೆಗೆ ಬರುವರು*]

**ಸ್ನೇಹಿತ ೧** : ಗದಾಯ್, ಗದಾಯ್!

**ಸ್ನೇಹಿತ ೨** : ಇದೋ, ಬಂದ.

**ಗದಾಯ್** : ಏನ್ರೋ ನಾಟಕಕ್ಕೆ ಪಾತ್ರಹಾಕೋ ಹೊತ್ತಾಗಿದೆ. ಇನ್ನೂ ಇಲ್ಲೇ ಇದ್ದೀರ!

**ಸ್ನೇಹಿತ ೩** : ಗದಾಯ್, ನೀನು ನಮಗೊಂದು ಸಹಾಯ ಮಾಡಬೇಕು ಕಣೋ.

**ಗದಾಯ್** : ಏನೋ ಅದು?

**ಸ್ನೇಹಿತ ೬** : ಶಿವನ ಪಾತ್ರ ವಹಿಸಬೇಕಿತ್ತಲ್ಲ ರಾಮು, ಅವನು ತುಂಬಾ ಜ್ವರ ಚಳಿ ಬಂದು ಮಲಗಿಬಿಟ್ಟಿದ್ದಾನೆ, ಅವನಿಗೆ ಏಳೋಕೇ ಆಗ್ತಾ ಇಲ್ಲ. ಆದ್ದರಿಂದ ಈಗ ನಾಟಕ ಮಾಡೋದು ಹೇಗೆ, ಅಂತ ಯೋಚಿಸಿ ನಿನ್ನ ಹತ್ತಿರ ಬಂದೆವು.

**ಗದಾಯ್** : ಅಯ್ಯಯ್ಯೋ, ಈ ರೀತಿ ಆಗಿಹೋಯಿತೇ? ಈಗೇನು ಮಾಡ್ತೀರಿ?

**ಸ್ನೇಹಿತ ೮** : ನಾಟಕ ನಿಲ್ಲಿಸೋಣವೇ?

**ಗದಾಯ್** : ಆದರೆ ಎಷ್ಟೋ ಜನ ನಾಟಕ ನೋಡುತ್ತಾ ಶಿವನ ಹೆಸರಿನಲ್ಲಿ ಜಾಗರಣೆ ಮಾಡೋಣವೆಂದು ಬಂದಿದ್ದಾರೆ. ಅವರಿಗೆಲ್ಲ ನಿರಾಸೆಯಾಗುವುದಿಲ್ಲವೆ?

**ಸ್ನೇಹಿತ ೧** : ಏನು ಮಾಡೋದು? ಈ ಕಡೇ ಘಳಿಗೆಯಲ್ಲಿ ಯಾರು ಶಿವನ ಪಾತ್ರ ಕಲಿತು ಮಾಡಲು ಸಾಧ್ಯ?

**ಸ್ನೇಹಿತ ೨** : ಅದು ನಿನ್ನ ಒಬ್ಬನಿಂದಲೆ ಸಾಧ್ಯ, ಗದಾಯ್.

**ಗದಾಯ್** : ಏನು ನಾನು ಶಿವನ ಪಾತ್ರ ಹಾಕಬೇಕೆ?

**ಸ್ನೇಹಿತ ೩** : ದಯವಿಟ್ಟು, ಗದಾಯ್, ಇಲ್ಲ ಅನ್ನಬೇಡ.

**ಗದಾಯ್** : ಆದರೆ ನಾನು ಆಗಲೇ ಈ ರಾತ್ರಿಯೆಲ್ಲ ಶಿವನ ಪೂಜೆ ಧ್ಯಾನಗಳಲ್ಲಿ ನಿರತನಾಗಿರಬೇಕೆಂದು ನಿಶ್ಚಯಿಸಿದ್ದೇನಲ್ಲ.

**ಸ್ನೇಹಿತ ೪** : ಅದಕ್ಕೇನು ಗದಾಯ್, ನೋಡು ನೀನು ಶಿವನ ಪೂಜೆ ಧ್ಯಾನ ಮಾಡುವಾಗ ನಿನ್ನ ಮನಸ್ಸು ಎಲ್ಲಿರುತ್ತೆ?

**ಗದಾಯ್** : ಶಿವನಲ್ಲಿ.

**ಸ್ನೇಹಿತ ೪** : ಹಾಗೆಯೇ ನೀನು ನಾಟಕದಲ್ಲಿ ಶಿವನಾದರೆ ನಿನ್ನ ಮನಸ್ಸು ಏನನ್ನು ನೆನೆಯುತ್ತಿರುತ್ತದೆ?

**ಗದಾಯ್** : ಶಿವನನ್ನೇ.

**ಸ್ನೇಹಿತ ೨** : ಮತ್ತೆ ನಿನಗೆ ಶಿವನಲ್ಲಿ ಮನಸ್ಸು ನೆಲೆಸುವುದು ಮುಖ್ಯ ತಾನೆ? ಅದು ಹೇಗಿದ್ದರೂ ನಾಟಕದಲ್ಲಿ ಪಾತ್ರ ಹಾಕುವುದರಿಂದಲೂ ಸಾಧ್ಯ ಅಂದಮೇಲೆ ಏಕೆ ನೀನು ಆ ಪಾತ್ರ ಮಾಡಬಾರದು?

**ಸ್ನೇಹಿತ ೩** : ನಿನಗೊಬ್ಬನಿಗೇ ಆ ಪಾತ್ರದ ಸಂಭಾಷಣೆಯೆಲ್ಲ ಬರುವುದು. ಆದ್ದರಿಂದ ಆ ಪಾತ್ರ ಮಾಡುವುದೇನು ನಿನಗೆ ಕಷ್ಟವಿಲ್ಲ.

**ಸ್ನೇಹಿತ ೨** : ನೋಡು, ನೀನೊಬ್ಬ ಶಿವಧ್ಯಾನ ಮಾಡುತ್ತಾ ಶಿವನನ್ನು ನೆನೆಯುವುದಕ್ಕಿಂತ ಸಾವಿರಾರು ಜನರಿಗೆ ಅವನನ್ನು ನೆನೆಯುವಂತೆ ಮಾಡುವುದು ಇನ್ನೂ ಹೆಚ್ಚಿನ ಪುಣ್ಯದ ವಿಷಯವಲ್ಲವೇ?

**ಗದಾಯ್** : ಹೌದು, ಅದೇನೋ ನಿಜ. ನನ್ನೊಬ್ಬನಿಂದ ಅಷ್ಟು ಜನಕ್ಕೆ ಜಾಗರಣೆಯ ಪುಣ್ಯ ಸಿಗುತ್ತದೆ ಅಂದಮೇಲೆ ನಾನು ಸಿದ್ಧ.

**ಎಲ್ಲರೂ** : ಓ, ಹುರ್‍ರ, ಹುರ್‍ರ, ಎಂದು ಗದಾಯ್‌ನನ್ನು ಎತ್ತಿಕೊಳ್ಳುವರು.

ದೃಶ್ಯ ೧೨

[*ಗದಾಯ್‌ಗೆ ಶಿವನ ವೇಷ ಹಾಕಿದ್ದಾರೆ. ಸೊಂಟದಲ್ಲಿ ಹುಲಿಯ ಚರ್ಮ, ಕಂಠದಲ್ಲಿ ರುದ್ರಾಕ್ಷಿ, ತಲೆಯಲ್ಲಿ ಜಟೆ, ಕೈಯಲ್ಲಿ ಕಮಂಡಲ, ತ್ರಿಶೂಲ, ಮೈಯೆಲ್ಲಾ ಬೂದಿ. ಶಿವನ ವೇಷ ಧರಿಸುತ್ತಿದ್ದಂತೆ ಗದಾಯ್ ಮನಸ್ಸು ಶಿವನಲ್ಲಿ ಲೀನವಾಗುತ್ತಿದೆ. ಮೊಗದಲ್ಲಿ ಅಪೂರ್ವ ತೇಜಸ್ಸು ಬಂದಿದೆ. ಮೊದಲನೆ ದೃಶ್ಯವೇ ಶಿವನು ರಂಗಭೂಮಿಯ ಮೇಲೆ ಬರುವುದು. ಶಿವನನ್ನು ಕರೆತಂದು ರಂಗಭೂಮಿಯ ಮೇಲೆ ನಿಲ್ಲಿಸಿದರು. ಪರದೆ ಎದ್ದಿತು. ಶಿವನನ್ನು ಕಂಡ ಜನ ರೋಮಾಂಚನಗೊಂಡರು. ಸಾಕ್ಷಾತ್ ಕೈಲಾಸದ ಶಿವ ಎದುರಿಗೆ ಬಂದು ನಿಂತಂತಿದೆ. ಗದಾಯ್‌ಗೆ ಮೈಮೇಲೆ ಪರಿವೆಯೇ ಇಲ್ಲ. ಮನಸ್ಸು ಪರಶಿವನಲ್ಲಿ ಲೀನವಾಗಿಹೋಗಿದೆ. ಅವನು ಸಮಾಧಿಮಗ್ನನಾಗಿದ್ದಾನೆ. ಹಿಂದಿನಿಂದ ಸ್ನೇಹಿತರು ಕೂಗುತ್ತಿದ್ದಾರೆ.*]

ಸ್ನೇಹಿತ ೧ : ಗದಾಯ್, ಗದಾಯ್ ಮಾತಾಡೋ.

ಸ್ನೇಹಿತ ೨ : ಏಯ್, ಏಕೋ, ಹಾಗೆ ನಿಂತಿದ್ದೀಯ, ಮಾತಾಡೋ.

ಸ್ನೇಹಿತ ೩ : ಲೋ, ಅವನು ಧ್ಯಾನಮಗ್ನನಾಗಿ ಬಿಟ್ಟಿದ್ದಾನೆ ಕಣೋ. ಇನ್ನು ಅವನು ಮಾತನಾಡುವುದಿಲ್ಲ.

ಸ್ನೇಹಿತ ೪ : ಮತ್ತೀಗೇನು ಮಾಡುವುದು?

ಸ್ನೇಹಿತ ೫ : ಇರು, ನಾನೇ ಜನಗಳಿಗೆ ಸಮಾಧಾನ ಹೇಳಿ ಕಳುಹಿಸುತ್ತೇನೆ. [*ಅವನು ರಂಗಭೂಮಿಗೆ ಬಂದು ಹೇಳುತ್ತಾನೆ.*] ನೋಡಿ, ನೀವೆಲ್ಲರೂ ನೋಡುತ್ತಿರುವಂತೆ ಶಿವನ ವೇಷಧಾರಿಯಾದ ಗದಾಧರ ಶಿವನ ಪಾತ್ರ ಹಾಕುತ್ತಿದ್ದಂತೆಯೇ ಅದರಲ್ಲೇ ತನ್ಮಯನಾಗಿ ಹೋಗಿದ್ದಾನೆ. ಅವನಿಂದ ಪಾತ್ರ ಮಾಡಲಾಗುತ್ತಿಲ್ಲ. ಆದ್ದರಿಂದ ದಯವಿಟ್ಟು ನೀವೆಲ್ಲ ನಮ್ಮನ್ನು ಉದಾರ ಮನಸ್ಸಿನಿಂದ ಕ್ಷಮಿಸಿ ಸಮಾಧಾನಚಿತ್ತರಾಗಿ ಮನೆಗಳಿಗೆ ಹೋಗಬೇಕೆಂದು ಬೇಡುತ್ತೇವೆ.

ಜನ : ನೀವೇನೂ ಯೋಚಿಸಬೇಡಿ. ನಮಗೆ ನಾಟಕ ನೋಡುವುದಕ್ಕಿಂತ ಸಾಕ್ಷಾತ್ ಶಿವನನ್ನೇ ನೋಡಿದ ಅನುಭವ ಆಗುತ್ತಿದೆ. ಆದ್ದರಿಂದ ನಾವೆಲ್ಲ ಸಂತೃಪ್ತರಾಗಿದ್ದೇವೆ.

[*ಎಲ್ಲರೂ ಹೋಗುವರು.*]

ದೃಶ್ಯ ೧೩ [*ಶ್ರೀನಿವಾಸ ಶಂಖಾರಿ*]

[*ಶ್ರೀರಾಮಕೃಷ್ಣರು ಅವತಾರ ಪುರುಷರೆಂದು ಅವರ ಬಾಲ್ಯದಲ್ಲಿ ಗುರುತಿಸಿದವರು ವಿರಳ. ಆದರೆ ಕಾಮಾರಪುಕೂರದಲ್ಲಿ ಶ್ರೀನಿವಾಸ ಶಂಖಾರಿ ಎಂಬ ಒಬ್ಬ ಬಳೆ ಮಾರುವವನಿದ್ದ. ಅವನು ರಾಮಕೃಷ್ಣರೊಡನೆ ಅನೇಕ ವೇಳೆ ಭಾಗವತದ ಮೇಲೆ ಚರ್ಚೆ ಮಾಡುತ್ತಿದ್ದ. ಒಂದು ದಿನ ಅವನು ಹೂಮಾಲೆ ಕಟ್ಟುತ್ತಾ ಕುಳಿತಿದ್ದಾನೆ. ಅಲ್ಲಿಗೆ ಗದಾಯ್ ಬರುತ್ತಾನೆ.*]

ಶ್ರೀನಿವಾಸ : ಗದಾಯ್, ಇಲ್ಲಿ ಬಾ.

ಗದಾಯ್ : ಏನು?

ಶ್ರೀನಿವಾಸ : ನನ್ನ ಜೊತೆ ಸ್ವಲ್ಪ ಬಾ.

[*ಒಂದು ನಿರ್ಜನ ಪ್ರದೇಶಕ್ಕೆ ಕರೆದೊಯ್ಯುತ್ತಾನೆ.*]

ಗದಾಯ್ : ಇದೇಕೆ ಈ ನಿರ್ಜನ ಪ್ರದೇಶಕ್ಕೆ ಕರೆತಂದೆ?

ಶ್ರೀನಿವಾಸ : ಇರು, [*ಆಸನ ಹಾಕಿ*] ಈ ಆಸನದ ಮೇಲೆ ಕುಳಿತುಕೊ.

ಗದಾಯ್ : [*ಆಸನದ ಮೇಲೆ ಕುಳಿತುಕೊಳ್ಳುತ್ತ*] ಇದೇನು ಮಾಡುತ್ತಿದ್ದೀಯೆ?

[*ಹಾರ ಹಾಕುವನು, ಸಿಹಿ ತಿನ್ನಿಸುವನು* ] ಇದೇನು ಶ್ರೀನಿವಾಸ, ಈ ರೀತಿ ಮಾಡುತ್ತಿರುವೆ?

ಶ್ರೀನಿವಾಸ : [*ಗದ್ಗದ ಕಂಠದಿಂದ*] : ಗದಾಯ್, ನನಗೆ ವಯಸ್ಸಾಗಿದೆ. ಕೊನೆಗಾಲ ಬರುತ್ತಿರುವಂತೆ ಕಾಣುತ್ತಿದೆ. ನೀನು ಮುಂದೆ ಪ್ರಪಂಚದಲ್ಲಿ ಅನೇಕ ಅದ್ಭುತ ಲೀಲೆಗಳನ್ನು ಮಾಡುವವನಿದ್ದೀಯೆ. ಆದರೆ ಅದನ್ನು ನೋಡುವ ಅದೃಷ್ಟ ನನಗಿಲ್ಲ. ಆದ್ದರಿಂದ ಈಗಲೇ ನೀನು ಈ ಸಾಮಾನ್ಯ ದಾಸನ ಮೇಲೆ ಕೃಪೆ ತೋರಬೇಕೆಂದು ಬೇಡುವೆ. [*ನಮಸ್ಕರಿಸುವನು.*]

ಗದಾಯ್ : ಏಳು ಶಂಖಾರಿ, ನೀನು ಸದ್ಭಕ್ತ. ನಿನಗೇನು ಭಯವಿಲ್ಲ ಏಳು.

ಶ್ರೀನಿವಾಸ : ನೀನು ಇಷ್ಟು ಅಭಯ ಕೊಟ್ಟಮೇಲೆ ಸಾಕು ಪ್ರಭು, ನಾನು ಧನ್ಯ.

ಗದಾಯ್ : ನಡೆ ಊರೊಳಗೆ ಹೋಗೋಣ.

ದೃಶ್ಯ ೧೪

ರಾಮ್‌ಕುಮಾರ್ : ಅಮ್ಮ, ಗದಾಯ್ ಇಲ್ಲಿ ಪಾಠಶಾಲೆಗೂ ಹೋಗುತ್ತಿಲ್ಲ. ವಿದ್ಯೆಯನ್ನೂ ಕಲಿಯುತ್ತಿಲ್ಲ. ಈಗಾಗಲೇ ಅವನಿಗೆ ಹದಿನೇಳು ವರ್ಷವಾಯಿತು.

ಚಂದ್ರ : ಹೌದಪ್ಪ, ಹಾಗೇಕೆ ಮಾಡುತ್ತೀ ಎಂದರೆ, ನನಗೆ ಈ ಹೊಟ್ಟೆಪಾಡಿನ ವಿದ್ಯೆ ಬೇಡ ಅನ್ನುತ್ತಾನೆ. ಹಾಗಾದರೆ ಮುಂದೆ ಸಂಸಾರ ಹೇಗೆ ಮಾಡುತ್ತೀಯೋ ಅಂದರೆ, ನನಗೆ ಸಂಸಾರ ಬೇಡ, ನನ್ನ ಜೀವನದ ಉದ್ದೇಶವೇ ಬೇರೆ ಅನ್ನುತ್ತಾನೆ.

ರಾಮ್ : ಅಮ್ಮ, ಅವನಿಲ್ಲಿದ್ದರೆ ಏನೂ ಪ್ರಯೋಜನವಿಲ್ಲ. ಆದ್ದರಿಂದ ಈ ಸರ್ತಿ ನಾನು ಕಲ್ಕತ್ತಾಗೆ ಹೋಗುವಾಗ ಅವನನ್ನು ಜೊತೆಯಲ್ಲಿ ಕರೆದೊಯ್ಯುತ್ತೇನೆ. ಇದರಿಂದ ಅವನ ವಿದ್ಯೆಯೂ ಮುಂದುವರೆಯುತ್ತದೆ. ನನ್ನ ಶಾಲೆಗೂ ಸಹಾಯವಾಗುತ್ತದೆ.

ಚಂದ್ರ : ಸರಿಯಪ್ಪ, ನಿನಗೆ ಹೇಗೆ ಸರಿ ಅನ್ನಿಸುತ್ತದೆಯೋ, ಹಾಗೆಯೇ ಮಾಡು. ಅವನು ಒಂದು ನೆಲೆಗೆ ನಿಂತರೆ ಸಾಕು.

[*ಈ ರೀತಿ ತನ್ನ ಅಣ್ಣನಾದ ರಾಮ್‌ಕುಮಾರ್‌ನೊಂದಿಗೆ ಗದಾಯ್ ಹೊರಟ ಕಲ್ಕತ್ತಾಗೆ, ಮುಂದೆ ಪ್ರಸಿದ್ಧ ಪುರುಷ ಶ್ರೀರಾಮಕೃಷ್ಣ ಪರಮಹಂಸರಾಗಲು.*]